ಈ)

1. ನಮೂನೆ 50 ಹಾಗೂ 53 ರ ಒತ್ತುವರಿ ಬಾಕಿ ಪ್ರಕರಣಗಳ ಒತ್ತುವರಿ ಹೊರತು ಪಡಿಸಿ ಉಳಿದ ಪ್ರಕರಣಗಳಲ್ಲಿ ಒತ್ತುವರಿ ತೆರವಿಗಾಗಿ ಕ್ರಮ ಜರುಗಿಸಲಾಗುತ್ತಿದೆ. ಒಟ್ಟು 57 ಪ್ರಕರಣಗಳಲ್ಲಿ 314-00 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಕರ್ನಾಟಕ ಭೂ ಕಂದಾಯ ಕಲಂ 192(ಎ) ರ ಅನ್ವಯ 11 ಪ್ರಕರಣಗಳಲ್ಲಿ ಪ್ರಕರಣ ದಾಖಲಿಸಲಾಗಿದೆ.
2. ಹಲವಾರು ಜನರು ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿದ್ದು ಈ ಪೈಕಿ ಅನಧಿಕೃತ ಕಟ್ಟಡ ಸಕ್ರಮಗೊಳಿಸಲು ಮಹಾನಗರಪಾಲಿಕೆಗೆ 317 ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಇಂತಹ ಅನಧಿಕೃತ ಕಟ್ಟಡಗಳ ಸಕ್ರಮಕ್ಕೆ ಕಾನೂನು ತಿದ್ದುಪಡಿ ಆಗಬೇಕಾಗಿದೆ.
3. ಅನಧಿಕೃತ ಕಟ್ಟಡಗಳಿಗೆ ದಂಡ ವಿಧಿಸಲು ನೋಟೀಸುಗಳನ್ನು ಸಹ ನೀಡಿ ಕ್ರಮವಹಿಸಲಾಗುತ್ತಿದೆ.
4. 24 ಪ್ರಕರಣಗಳಲ್ಲಿ ವಿಚಾರಣೆ ನಡೆಸಿ ಒತ್ತುವರಿ ತೆರವಿಗಾಗಿ ಕ್ರಮವಹಿಸಲಾಗಿದೆ ವಿವರ ಲಗತ್ತಿಸಿದೆ.
5. ಮೈಸೂರು ನಗರದ ಸುತ್ತ ಮುತ್ತ ಒತ್ತುವರಿ ಮಾಡಿದ ಸರ್ಕಾರಿ ಜಮೀನು ಅಕ್ರಮ ಸಕ್ರಮ ನಿಯಮಗಳ ಅನುಸಾರ ಸಕ್ರಮಗೊಳಿಸಲು ಸಾಧ್ಯವಾಗದ ಕಾರಣ ಅವರ ಕೋರಿಕೆಗಳನ್ನು ತಿರಸ್ಕರಿಸಲಾಗಿದ್ದು, ಅಂತಹ ಒತ್ತುವರಿಗಳನ್ನು ತೆರವುಗೊಳಿಸುವುದಕ್ಕೆ ನೋಟೀಸು ನೀಡಲು ಕ್ರಮವಹಿಸಲಾಗುತ್ತಿದೆ.

ಆಯವ್ಯಯದಲ್ಲಿ ಘೋಷಿಸಿರುವ ಯೋಜನೆಗಳ ಕುರಿತು
(238)153

ಶ್ರೀ ಮಂಜು ಎ(ಅರಕಲಗೂಡು)

ಅ) ಆಸರೆ ಯೋಜನೆಯಡಿ ಇಲ್ಲಿಯವರೆವಿಗೂ ಎಷ್ಟು ಮನೆಗಳ ನಿರ್ಮಾಣ ಆಗಿದೆ? ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ, ಬಾಕಿ ಉಳಿದಿರುವ ಮನೆಗಳನ್ನು ಕಟ್ಟಲು ಇರುವ ತೊಂದರೆ ಏನು? ಹಂಚಿಕೆ ಮಾಡಿದ ಮನೆಗಳ ಪೈಕಿ ಎಷ್ಟು ಮನೆಗಳಲ್ಲಿ ಫಲಾನುಭವಿಗಳು ವಾಸಿಸುತ್ತಿದ್ದಾರೆ?

ಆ) ಈ ಮನೆಗಳಿಗೆ ಮೂಲಸೌಕರ್ಯ ಒದಗಿಸಲು ಎಷ್ಟು ವೆಚ್ಚ ಮಾಡಲಾಗಿದೆ?(ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ದಾನಿಗಳು ಎಷ್ಟು ಮನೆಗಳನ್ನು ನಿರ್ಮಿಸಿರುತ್ತಾರೆ?

ಶ್ರೀ ಕೆ.ಎಸ್. ಈಶ್ವರಪ್ಪ
ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು

ಅ) 2009ರ ಪ್ರವಾಹ ಸಂತ್ರಸ್ಥರಿಗೆ ಪುನರ್‌ವಸತಿ ಕಲ್ಪಿಸುವ ಸಲುವಾಗಿ ಕರ್ನಾಟಕ ಸರ್ಕಾರ ಆಸರೆ ಯೋಜನೆಯನ್ನು ಜಾರಿಗೆ ತಂದು ಸದರಿ ಯೋಜನೆಯಡಿಯಲ್ಲಿ ಪೂರ್ಣ–149 ಭಾಗಶಃ – 140 ಸೇರಿ ಒಟ್ಟು 289 ಗ್ರಾಮಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ಒಟ್ಟು 57,389 ಮನೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು ಈಗಾಗಲೇ 501,15 ಮನೆಗಳ ನಿರ್ಮಾಣ ಪೂರ್ಣಗೊಂಡಿದೆ ಇದರಲ್ಲಿ 39,219 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರಗೊಂಡಿರುವ 35,229 ಮನೆಗಳಲ್ಲಿ ಫಲಾನುಭವಿಗಳು ವಾಸಿಸುತ್ತಿದ್ದಾರೆ. ಹಲವು ಗ್ರಾಮಗಳಲ್ಲಿ ಪುನರ್ ವಸತಿಗೆ ಜಮೀನಿನ ಕೊರತೆ, ಕಪ್ಪು ಮಣ್ಣಿನಲ್ಲಿ ಮನೆಗಳ ನಿರ್ಮಾಣ, ದಾನಿಗಳು ಮನೆಗಳ ನಿರ್ಮಾಣವನ್ನು ಕೈಬಿಟ್ಟಿರುವುದು ಹಾಗೂ ಭೂ–ಸ್ವಾದೀನಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ನ್ಯಾಯಾಲಯದಲ್ಲಿರುವುದರಿಂದ ಮನೆಗಳ ನಿರ್ಮಾಣ ಕಾರ್ಯ ವಿಳಂಬವಾಗಿರುತ್ತದೆ.

ಆ) ಆಸರೆ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಕ್ಕಾಗಿ ರೂ.13329.001 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ವಿವರ ಅನುಬಂಧದಲ್ಲಿ ನೀಡಿದೆ.

ಇ) ದಾನಿಗಳು ನಿರ್ಮಿಸಿರುವ ಮನೆಗಳ ಸಂಖ್ಯೆ–20,918

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜು.ಎ (ಅರಕಲಗೂಡು) ಇವರ ಚುಕ್ಕೆ ಗುರುತಿಲ್ಲದ ಪ್ರಸಂ. 153 ಕ್ಕೆ ಅನುಬಂಧ

ಕ್ರ.ಸಂ	ಜಿಲ್ಲೆ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1	ದಾವಣಗೆರೆ	100.00
2	ಧಾರವಾಡ	649.193
3	ಬೆಳಗಾಂ	550.65
4	ಹಾವೇರಿ	140.00
5	ಕಾರವಾರ	43.50
6	ರಾಯಚೂರು	2137.66
7	ಬೀದರ್	100.00
8	ಯಾದಗಿರಿ	937.47
9	ಗುಲ್ಬರ್ಗಾ	1241.94
10	ಬಾಗಲಕೋಟೆ	2153.48
11	ಕೊಪ್ಪಳ	718.50
12	ಬಿಜಾಪುರ	1806.30
13	ಗದಗ	2252.92
14	ಬಳ್ಳಾರಿ	497.40
	ಒಟ್ಟು	**13329.01**